Spl. C 19/2022
PW: 04
CW: 07

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## SPECIAL CASE : 19/2022

**ಫ್ರಾ.ಸಾ. 04**

**ದೋ.ಸಾ. 07**

| | | |
|---|---|---|
| ಸಾಕ್ಷಿಯ ಹೆಸರು | : | ಸಿ ವಿ ಚಂದ್ರಶೇಖರ್ |
| ತಂದೆಯ ಹೆಸರು | : | ಲೇಟ್ ಎಂ ಸಿ ವೆಂಕಟರಮಣ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಎಎಸ್ಐ, ಚಿಕ್ಕಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ |
| ವಾಸ | : | ಚಿಕ್ಕಬಳ್ಳಾಪುರ |

**ದಿನಾಂಕ 15.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ಜೂನ್–2016 ರಿಂದ ಜುಲೈ–2021 ವರೆಗೆ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2). ದಿನಾಂಕ 28.06.2021 ರಂದು ಬೆಳಿಗ್ಗೆ 10.00 ಗಂಟೆಗೆ ನಾನು ಮತ್ತು ನಮ್ಮ ಠಾಣೆಯ ಸಿಬ್ಬಂದಿಗಳಾದ ಪಿಸಿ–23 ರೋಶನ್ ಜಮೀರ್, ಪಿಸಿ–504 ಸತೀಶ್ ಮತ್ತು ಪಿಸಿ–16 ಲೋಕೇಶ್ ರವರು ಠಾಣೆಯಲ್ಲಿದ್ದಾಗ ಪಿಎಸ್ಐ ನಾರಾಯಣಸ್ವಾಮಿ ರವರಿಗೆ ಠಾಣಾ ಸರಹದ್ದಿಗೆ ಸೇರಿದ ಎ.ಹೊಸಹಳ್ಳಿ ಗ್ರಾಮದ ವೆಂಕಟರಾಮರೆಡ್ಡಿ ಬಿನ್ ಪೆದ್ದಣ್ಣ ಎಂಬುವವರು ಅದೇ ಗ್ರಾಮದ ಸರ್ವೆ ನಂಬರ್ 17 ರಲ್ಲಿರುವ ಆತನ ಮಾವ ಆವುಲರೆಡ್ಡಿ ಬಿನ್ ನಾರಾಯಣಪ್ಪರವರ ಜಮೀನಿನಲ್ಲಿ ಇರುವ ಶೆಡ್ಡಿನಲ್ಲಿ ನಾಲ್ಕು ಗಾಂಜಾ ಗಿಡಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಶೇಖರಿಸಿ ಇಟ್ಟಿರುವ ಬಗ್ಗೆ

ಖಚಿತ ಮಾಹಿತಿ ಬಂದಿದ್ದು, ಅದರಂತೆ ಪಿಎಸ್ಐ ರವರು ನನ್ನನ್ನು ಮತ್ತು ಮೇಲ್ಕಂಡ ಸಿಬ್ಬಂದಿಯವರನ್ನು ಸರ್ಕಾರಿ ಜೀಪಿನಲ್ಲಿ ಮೇಲ್ಕಂಡ ಸ್ಥಳಕ್ಕೆ ಕರೆದುಕೊಂಡು ಹೋಗಿ ಸದರಿ ಶೆಡ್ ನಲ್ಲಿ ನೋಡಲಾಗಿ ಇತ್ತೀಚೆಗೆ ಕಿತ್ತು ಇಟ್ಟಿರುವ ನಾಲ್ಕು ಗಾಂಜಾ ಗಿಡಗಳು ಇರುತ್ತವೆ. ಸದರಿ ವಿಚಾರವನ್ನು ಪಿಎಸ್ಐ ರವರು ತಾಲ್ಲೂಕು ದಂಡಾಧಿಕಾರಿಗಳಿಗೆ ಫೋನ್ ಮಾಡಿ ತಿಳಿಸಿ, ಮಹಜರ್ ಕ್ರಮ ಕೈಗೊಳ್ಳಲು ಸರ್ಕಾರಿ ಸಿಬ್ಬಂದಿಯವರನ್ನು ಒದಗಿಸುವಂತೆ ಕೋರಿ ನಂತರ ಪಿಸಿ-23 ರೋಶನ್ ಜಮೀರ್ ರವರ ಮೂಲಕ ದೂರನ್ನು ತಯಾರಿಸಿ ಠಾಣೆಗೆ ಕಳುಹಿಸಿಕೊಟ್ಟಿರುತ್ತಾರೆ.

3). ನಂತರ ಪಿಎಸ್ಐ ನಾರಾಯಣಸ್ವಾಮಿರವರು ಮುನುಗನಹಳ್ಳಿ ಗ್ರಾಮ ಪಂಚಾಯತಿಗೆ ಹೋಗಿ, ಸದರಿ ಗ್ರಾಮ ಪಂಚಾಯತಿಯ ಕಂದಾಯ ನಿರೀಕ್ಷಕರಾದ ಗೋಕುಲ್ ಹಾಗೂ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾದ ಮಧುಕರ್ ಮತ್ತು ಗ್ರಾಮ ಲೆಕ್ಕಿಗರಾದ ನಾಗವೇಣಿರವರನ್ನು ಸ್ಥಳಕ್ಕೆ ಕರೆದುಕೊಂಡು ಬಂದಿರುತ್ತಾರೆ. ಈ ವೇಳೆ ಪಿಸಿ-23 ರೋಶನ್ ಜಮೀರ್ ರವರು ದೂರನ್ನು ಠಾಣೆಗೆ ಕೊಟ್ಟು ಪ್ರಥಮ ವರ್ತಮಾನ ವರದಿಯ ಪ್ರತಿಯ ಸಮೇತ ಸ್ಥಳಕ್ಕೆ ಬಂದಿರುತ್ತಾರೆ. ನಂತರ ಮೇಲ್ಕಂಡ ಪಂಚರ ಸಮಕ್ಷಮ ಪಿಎಸ್ಐ ರವರು ಸದರಿ ಶೆಡ್ಡಿನಲ್ಲಿದ್ದ ಗಾಂಜಾ ಗಿಡಗಳನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಸದರಿ ಗಾಂಜಾದ ಒಟ್ಟು ತೂಕ 1 ಕೆಜಿ 520 ಗ್ರಾಮ್ ಆಗಿದ್ದು, ಅದರ ಅಂದಾಜು ಬೆಲೆ ರೂ.30,000/- ಆಗಿರುತ್ತದೆ. ನಂತರ ಸದರಿ ಗಾಂಜಾದಿಂದ ಮಾದರಿಗಾಗಿ ಸುಮಾರು 50 ಗ್ರಾಮ್ ಗಾಂಜಾವನ್ನು ಎಫ್.ಎಸ್.ಎಲ್ ಗೆ ಕಳುಹಿಸುವ ಸಲುವಾಗಿ ಒಂದು ಬಿಳಿ ಬಟ್ಟೆಯಲ್ಲಿ ಹಾಕಿ "SR" ಎಂಬ ಅರಗು ಸೀಲನ್ನು ಹಾಕಿ ವಶಕ್ಕೆ ಪಡೆದುಕೊಂಡಿರುತ್ತಾರೆ ಹಾಗೆಯೇ ಉಳಿದ ಗಾಂಜಾ ಗಿಡಗಳನ್ನು ಇನ್ನೊಂದು ಬಿಳಿ ಚೀಲಕ್ಕೆ ಹಾಕಿ ಅರಗು ಸೀಲನ್ನು ಹಾಕಿ ವಶಕ್ಕೆ ಪಡೆದುಕೊಂಡಿರುತ್ತಾರೆ. ಮೇಲ್ಕಂಡ ಎಲ್ಲಾ ವಿದ್ಯಾಮಾನಗಳನ್ನು ಪಂಚರ ಸಮಕ್ಷಮ ಸ್ಥಳದಲ್ಲೇ ಟೈಪ್ ಮಾಡಿ ನಿಪಿ-2 ರಂತೆ ಮಹಜರನ್ನು ಪಿಎಸ್ಐರವರು

ತಯಾರಿಸಿರುತ್ತಾರೆ. ಈಗ ಸಾಕ್ಷಿ ನಿಪಿ-2 ಮಹಜರನ್ನು ನೋಡಿ, ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ನಿಪಿ-3(1 ರಿಂದ 4)ರಂತೆ ಫೋಟೋಗಳನ್ನು ಕೂಡ ತೆಗೆದಿರುತ್ತಾರೆ. ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡ ಗಾಂಜಾವನ್ನು ನೋಡಿ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಈ ದಿನ ಗೈರುಹಾಜರಾಗಿರುವ ಆರೋಪಿಯನ್ನು ಸಾಕ್ಷಿ ನೋಡಿದರೆ ಗುರುತಿಸಬಲ್ಲೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನಾನು ನನ್ನ ಮೇಲಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಜಿ.ಆರ್.ಎಸ್ ವಕೀಲರಿಂದಃ**

4). ಬಾತ್ಮೀದಾರರಿಂದ ಖಚಿತ ಮಾಹಿತಿ ಬಂದಾಗ ಸಮಯ ಬೆಳಿಗ್ಗೆ 10.00 ಗಂಟೆಯಾಗಿತ್ತು. ಆ ಸಮಯದಲ್ಲಿ ನಾನು ಹಾಗೂ ನನ್ನ ಸಿಬ್ಬಂದಿಗಳು ಪೊಲೀಸ್ ಠಾಣೆಯಲ್ಲೇ ಇದ್ದೇವು. ಠಾಣೆಯಿಂದ ಘಟನಾ ಸ್ಥಳ ಎಂದು ಹೇಳಲಾದ ಸ್ಥಳ ಸುಮಾರು 7 ಕಿಲೋ ಮೀಟರ್ ದೂರ ಇರುತ್ತದ. ಠಾಣೆಯನ್ನು 10.00 ಗಂಟೆಗೆ ಬಿಟ್ಟು ಘಟನಾ ಸ್ಥಳಕ್ಕೆ ಹೋಗುವಾಗ ಸಮಯ ಸುಮಾರು 10.30 ಆಗಿರುತ್ತದೆ. ಈ ವೇಳೆಯಲ್ಲಿ ಅಂದರೆ ಬೆಳಿಗ್ಗೆ 10.00 ರಿಂದ 10.30 ಗಂಟೆಯವರೆಗೆ ನಮ್ಮ ಪಿಎಸ್ಐ ರವರು ಹಾಗೂ ನಾನು ಮೇಲ್ಕಂಡ ಪಂಚರಾದ ಕಂದಾಯ ನಿರೀಕ್ಷಕರಾದ ಗೋಕುಲ್, ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಮಧುಕರ್ ಹಾಗೂ ಗ್ರಾಮ ಲೆಕ್ಕಿಗರಾದ ನಾಗವೇಣಿರವರಿಗೆ ಈ ಘಟನೆಯ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಈ ಘಟನೆಯ ಪೂರ್ವದಲ್ಲಿ ಸರ್ವೆ ನಂಬರ್ 17ರ ಜಮೀನನ್ನು ನಾನು ನೋಡಿರುವುದಿಲ್ಲ. ಸದರಿ ಜಮೀನಿನ ಸರ್ವೆ ನಂಬರ್ 17 ಎಂದು ಹಾಗೂ ಅದರಲ್ಲಿ ಶೆಡ್ ಇರುವ ಬಗ್ಗೆ ಬಾತ್ಮೀದಾರರು ಪಿಎಸ್ಐ ರವರಿಗೆ ತಿಳಿಸಿರುತ್ತಾರೆ. ನಾವು ಘಟನಾ ಸ್ಥಳಕ್ಕೆ ಹೋದಾಗ ಶೆಡ್ಡಿನ ಬಾಗಿಲು ಚಿಲಕ ಹಾಕಿರುತ್ತದೆ ಆದರೆ ಬೀಗ ಹಾಕಿರುವುದಿಲ್ಲ. ಸದರಿ ಶೆಡ್ಡನ್ನು ತೆರೆದು ನೋಡಿದಾಗ ನನ್ನ ಜೊತೆ, ಪಿಎಸ್ಐ, ಪಿಸಿ-ಲೋಕೇಶ್, ಪಿಸಿ-

ರೋಶನ್ ಜಮೀರ್ ಹಾಗೂ ಪಿಸಿ-ಸತೀಶ್‌ರವರು ಮಾತ್ರ ಇದ್ದರು. ಆಗ ಸ್ಥಳೀಯರು ದೂರದಿಂದ ನೋಡುತ್ತಿದ್ದರು.

5). ನಾವು ಘಟನಾ ಸ್ಥಳಕ್ಕೆ ಹೋದಾಗ ನಮ್ಮ ಜೊತೆ ವಶಪಡಿಸಿಕೊಳ್ಳಲು ಬೇಕಾದ ವಸ್ತುಗಳನ್ನು ಪೊಲೀಸ್ ಠಾಣೆಯಿಂದ ತೆಗೆದುಕೊಂಡು ಹೋಗಿರುತ್ತೇವೆ. ನಾವು ಘಟನಾ ಸ್ಥಳಕ್ಕೆ ಹೋದ ಕೂಡಲೇ ಸದರಿ ಶೆಡ್ಡನ್ನು ಐದು ನಿಮಿಷದೊಳಗೆ ನೋಡಿರುತ್ತೇವೆ. ಸದರಿ ಶೆಡ್ಡಿನ ಒಳಗೆ ವಶಪಡಿಸಿಕೊಂಡದ್ದು ಎಂದು ಹೇಳಲಾದ ಗಾಂಜಾ ಗಿಡಗಳನ್ನು ಹೊರತುಪಡಿಸಿ ಬೇರೆ ವಸ್ತುಗಳಾದ ವೈರು ಹಾಗೂ ಇತರೇ ಬೇಡದ ವಸ್ತುಗಳು ಇದ್ದವು. ನಿಪಿ-3(1 ರಿಂದ 4)ರ ಫೋಟೋಗಳನ್ನು ತೆಗೆಯುವಾಗ ಸಮಯ ಮಧ್ಯಾಹ್ನ ಸುಮಾರು 12.00 ಗಂಟೆ ಆಗಿರಬಹುದು. ನಾವು ಘಟನಾ ಸ್ಥಳಕ್ಕೆ ಹೋದ ಕೂಡಲೇ ಸದರಿ ಶೆಡ್ಡಿನಲ್ಲಿ ವಶಪಡಿಸಿಕೊಂಡದ್ದು ಎಂದು ಹೇಳಲಾದ ಗಾಂಜಾ ಇತ್ತು ಎಂದು ತೋರಿಸಲು ಯಾವುದಾದರೂ ಫೋಟೋಗಳನ್ನು ತೆಗೆದಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಪ್ರಶ್ನೆಯನ್ನು ಪಿಎಸ್‌ಐರವರಿಗೆ ಕೇಳಬೇಕು ಎಂದು ನುಡಿಯುತ್ತಾರೆ.

6). ನಾವು ದಿನಾಂಕಃ28-06-2021ರಂದು ಎ.ಹೊಸಹಳ್ಳಿ ಗ್ರಾಮಕ್ಕೆ ಹೋಗಿಲ್ಲ ಹಾಗೂ ನಿಪಿ-2ರಂತೆ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಿಎಸ್‌ಐ ರವರು ಘಟನಾ ಸ್ಥಳದಿಂದ ಇಲಾಖಾ ಜೀಪಿನಲ್ಲಿ ಮುನುಗನಹಳ್ಳಿ ಗ್ರಾಮ ಪಂಚಾಯತಿ ಕಛೇರಿಗೆ ಹೋಗಿ, ಸದರಿ ಕಛೇರಿಯಿಂದ ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ, ಆಗ ಸಮಯ ಸುಮಾರು 11.55 ಗಂಟೆ ಆಗಿರುತ್ತದೆ. ಈ ವೇಳೆ ನಾನು ಘಟನಾ ಸ್ಥಳದಲ್ಲಿ ಪಿಎಸ್‌ಐ ರವರು ಬರುವುದನ್ನು ಕಾಯುತ್ತಾ ಇರುತ್ತೇನೆ. ಪಿಎಸ್‌ಐ ರವರು ಪಂಚರನ್ನು ಕರೆದುಕೊಂಡು ಬಂದ ನಂತರ ಸದರಿ ಸ್ಥಳದಲ್ಲಿ ಮಧಾಹ್ನ 1.30 ಗಂಟೆಯವರೆಗೆ ಇರುತ್ತೇವೆ. ಆ ಸಮಯದಲ್ಲಿ ಸರ್ವೆ ನಂಬರ್ 17ರ ಜಮೀನಿನ ಮಾಲೀಕರು ಯಾರು ಎಂದು, ಅದರಲ್ಲಿ ಏನು ಬೆಳೆ ಬೆಳೆದಿರುತ್ತಾರೆ

ಎಂದು ತಿಳಿದುಕೊಳ್ಳಲು ಪ್ರಯತ್ನಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸಾರ್ವಜನಿಕರು ಹಾಗೂ ಅಕ್ಕ–ಪಕ್ಕದ ಜಮೀನಿನವರು ಸದರಿ ಜಮೀನು ಆವುಲರೆಡ್ಡಿ ಬಿನ್ ನಾರಾಯಣಪ್ಪ ರವರಿಗೆ ಸೇರಿರುತ್ತದೆ ಎಂದು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಜಮೀನಿನಲ್ಲಿ ಹಾಗಾಲಕಾಯಿ ಗಿಡಗಳನ್ನು ಬೆಳೆಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ–3 (5 ಮತ್ತು 6)ರ ಫೋಟೋಗಳನ್ನು ಘಟನಾ ಸಮಯದಲ್ಲಿ ತೆಗೆದಿರುವುದಿಲ್ಲ. ಸದರಿ ಫೋಟೋಗಳನ್ನು ಆರೋಪಿ ಜಾಮೀನು ಪಡೆದುಕೊಂಡು ಬಂದ ನಂತರ ತನಿಖಾ ಸಮಯದಲ್ಲಿ ತೆಗೆದಿರುತ್ತೇವೆ. ನಿಪಿ–3 (5 ಮತ್ತು 6)ರ ಫೋಟೋಗಳಲ್ಲಿ ಹಾಗಲಕಾಯಿ ಗಿಡಗಳು ಕಂಡುಬರುವುದಿಲ್ಲ ಎಂದರೆ ಸರಿ. ನಿಪಿ–3 (5 ಮತ್ತು 6)ರ ಫೋಟೋಗಳನ್ನು ಈ ಪ್ರಕರಣಕ್ಕೆ ಸೃಷ್ಟಿಸಲಾಗಿರುತ್ತದೆ ಎಂದರೇ ಸರಿಯಲ್ಲ.

7). ಘಟನಾ ಸ್ಥಳದ ಮಹಜರನ್ನು ಹಾಗೂ ಸ್ಥಳದಲ್ಲಿ ಮಾಡಬೇಕಾದ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ ಠಾಣೆಗೆ ಮಧ್ಯಾಹ್ನ ಸುಮಾರು 2.00 – 2.30 ಗಂಟೆಗೆ ಹಿಂದಿರುಗಿರುತ್ತೇವೆ. ನಿಪಿ–2 ನ್ನು ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಹಾಗೂ ಈ ಪ್ರಕರಣದ ಶೆಡ್ಡಿಗೂ, ಜಮೀನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆಯ ಬಗ್ಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

**(ಎನ್.ವಿ. ಭವಾನಿ)**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.